KASM630000072026

Presented on : 05-01-2026
Registered on : 05-01-2026
Decided on : 29-07-2026
Duration : 0 years, 6 months, 24days

## ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸಾಗರ.

**ಉಪಸ್ಥಿತರು**
**ಶ್ರೀಮತಿ. ಚಾಂದಿನಿ ಜಿ.ಯು., ಬಿ.ಎ., ಎಲ್. ಎಲ್.ಬಿ.**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು, ಸಾಗರ.**

**ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆಃ 01/2026**
**ಜುಲೈ ತಿಂಗಳ 29 ನೇ ತಾರೀಖು 2026 ನೇ ಇಸವಿ**

**ದೂರುದಾರರು/ಅರ್ಜಿದಾರರುಃ**

1. ಸರೋಜ ಕೋಂ ಬೂದೇಶ ಆರ್,
ವಯಸ್ಸು ಸುಮಾರು 24 ವರ್ಷ

2. ಸಾನ್ವಿ ಬಿನ್ ಬೂದೇಶ,
ವಯಸ್ಸು ಸುಮಾರು 7 ವರ್ಷ

3. ಭುವನ್ ಬಿನ್ ಬೂದೇಶ,
ವಯಸ್ಸು ಸುಮಾರು 5 ವರ್ಷ

2 ಮತ್ತು 3 ನೇ ಅರ್ಜಿದಾರರು ಅಪ್ರಾಪ್ತ ವಯಸ್ಕರಾಗಿದ್ದು,
ಇವರ ಮೈನರ್ ಗಾರ್ಡಿಯನ್ ತಾಯಿ 1 ನೇ ಅರ್ಜಿದಾರರು

ಎಲ್ಲರ ಖಾಯಂ ವಾಸ : ಬನ್ನೂರು, ಸಾಲೂರು, ಶಿಕಾರಿಪುರ ತಾಲ್ಲೂಕು ಶಿವಮೊಗ್ಗ ಜಿಲ್ಲೆ.

ಹಾಲಿ ವಾಸ : ಕಾನ್ಲೆ ವಾಸ,
ತಾಳಗುಪ್ಪ ಹೋಬಳಿ, ಸಾಗರ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ

**(ಶ್ರೀ. ಕೆ.ಎಂ.ಎನ್., ವಕೀಲರು)**

**ವಿರುದ್ಧ**

**ಎದುರುದಾರರು:**

ಬೂದೇಶ ಆರ್ ಬಿನ್ ರೇವಪ್ಪ,
ವಯಸ್ಸು ಸುಮಾರು 42 ವರ್ಷ,
ವಾಸ: ಬನ್ನೂರು, ಸಾಲೂರು,
ಶಿಕಾರಿಪುರ ತಾಲ್ಲೂಕು ಶಿವಮೊಗ್ಗ ಜಿಲ್ಲೆ.

**(ಶ್ರೀ.ಎಸ್.ಎಂ.ಎಸ್., ವಕೀಲರು)**

## ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 144 ರಡಿ ಆದೇಶ

ಅರ್ಜಿದಾರರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ: 144 ರಡಿಯಲ್ಲಿ ಜೀವನಾಂಶವನ್ನು ಕೋರಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಅರ್ಜಿದಾರರ ಪ್ರಕರಣದ ಸಾರಾಂಶ.

1 ನೇ ಅರ್ಜಿದಾರಳು 2 ಮತ್ತು 3 ನೇ ಅರ್ಜಿದಾರರ ತಾಯಿ, ಎದುರುದಾರ, 1 ನೇ ಅರ್ಜಿದಾರಳ ಗಂಡ ಮತ್ತು 2 ಮತ್ತು 3 ನೇ ಅರ್ಜಿದಾರನ ತಂದೆ. ಅರ್ಜಿದಾರರು ಮತ್ತು ಎದುರುದಾರರ ವಿವಾಹವು ದಿನಾಂಕ: 18–06–2018 ರಂದು ಅರ್ಜಿದಾರರ ಮನೆಯಲ್ಲಿ ಹಿಂದೂ ಮತಪದ್ಧತಿಯಂತೆ ಗುರು–ಹಿರಿಯರ ಸಮ್ಮುಖದಲ್ಲಿ ನೆರವೇರಿರುತ್ತದೆ. ಮದುವೆಯ ಸಮಯದಲ್ಲಿ ವರದಕ್ಷಿಣೆ ರೂಪದಲ್ಲಿ ಒಂದು ಗಾಡ್ರೇಜ್, 15 ಗ್ರಾಂ ಬಂಗಾರದ ಸರ, ಒಂದು ಉಂಗುರ, ಒಂದು ಬೆಂಡೋಲೆ, ಜುಮುಕಿ, 2 ಲಕ್ಷ್ಮೀ ತಾಳಿ, 6 ಗುಂಡು, 80 ಸ್ವರ್ಣ ಗುಂಡುಗಳನ್ನು ನೀಡಿ ಹಾಗೂ ಮದುವೆಯನ್ನು ಎದುರುದಾರರ ಮನೆಯಲ್ಲಿ 1 ನೇ ಅರ್ಜಿದಾರರ ತಂದೆ–ತಾಯಿಯ ಖರ್ಚಿನಲ್ಲಿ ಮದುವೆಯನ್ನು ಮಾಡಿರುತ್ತಾರೆ. ನಂತರದಲ್ಲಿ ಶಿಕಾರಿಪುರ ಸಬ್ ರಿಜಿಸ್ಟ್ರಾರ್

ಕಛೇರಿಯಲ್ಲಿ ನೋಂದಣಿ ಸಂಖ್ಯೆ ಎಸ್‌ಕೆಪಿ–ಹೆಚ್‌ಎಮ್114–2018–19 ದಿನಾಂಕ: 21–06–2018 ರಂದು ನೆರವೇರಿರುತ್ತದೆ. ಮದುವೆಯಾದ ಬಳಿಕ ಅರ್ಜಿದಾರರು ಎದುರುದಾರರ ಜೊತೆ ದಾಂಪತ್ಯ ಜೀವನವನ್ನು ಎದುರುದಾರರ ಮನೆಯಲ್ಲಿ ಪ್ರಾರಂಭಿಸಿರುತ್ತಾರೆ. ಅರ್ಜಿದಾರರು ಎದುರುದಾರರೊಂದಿಗೆ ವಿವಾಹವಾಗಿ ಈಗ್ಗೆ ಸುಮಾರು 7 ವರ್ಷಗಳಾಗಿರುತ್ತದೆ. ಅರ್ಜಿದಾರರ ಹಾಗೂ ಎದುರುದಾರರ ದಾಂಪತ್ಯ ಜೀವನದಿಂದ ಇಬ್ಬರು ಮಕ್ಕಳಾಗಿರುತ್ತಾರೆ. ಎದುರು ಅರ್ಜಿದಾರರನ್ನು ಪ್ರಾರಂಭದಲ್ಲಿ ಚೆನ್ನಾಗಿ ನೋಡಿಕೊಂಡಿರುತ್ತಾರೆ. ಮದುವೆಯಾದ 2–3 ವರ್ಷಗಳ ನಂತರ ಅರ್ಜಿದಾರರಿಗೆ ಹಲವಾರು ರೀತಿ ತೊಂದರೆ ನೀಡುತ್ತಾ ಜಗಳ ಮಾಡುತ್ತಾ ಎದುರುದಾರರು ಬಂದಿದ್ದು, ಅದನ್ನು ಅರ್ಜಿದಾರರು ಸಹಿಸಿಕೊಂಡು ಇಲ್ಲಿಯವರೆಗೂ ಸಂಸಾರವನ್ನು ಮಾಡಿಕೊಂಡು ಬಂದಿರುತ್ತಾರೆ.

3. ಮುಂದುವರೆದು, ಎದುರುದಾರರು ದಿನ ನಿತ್ಯ ಅರ್ಜಿದಾರರ ಜೊತೆ ಕ್ಷುಲ್ಲಕ ಕಾರಣಗಳಿಗೋಸ್ಕರ ಜಗಳ ಮಾಡುತ್ತಾ ಕೆಲ ಸಂದರ್ಭದಲ್ಲಿ ಹಲ್ಲೆ ಮಾಡಿದ್ದು ಇರುತ್ತದೆ ಹಾಗೂ ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ 29-07-2020 ರಂತೆ ವರದಕ್ಷಿಣೆ ಕಿರುಕುಳ ಹಾಗೂ ಇನ್ನಿತರ ಸಮಸ್ಯೆಗಳ ಬಗ್ಗೆ ದೂರನ್ನು ನೀಡಿದ್ದು ಸದರಿ ಠಾಣೆಯ ಪೊಲೀಸರು ಎದುರುದಾರರನ್ನು ಕರೆಯಿಸಿ ಬುದ್ಧಿ ಮಾತನ್ನು ಹೇಳಿದರೂ ಕೂಡ ಎದುರುದಾರರು ಸ್ವಲ್ಪ ದಿನ ಚೆನ್ನಾಗಿರುವಂತೆ ನಟನೆ ಮಾಡಿ ಪುನಃ ಹಳೆ ಚಾಳಿಯನ್ನೇ ಮುಂದುವರಿಸಿಕೊಂಡು ಬಂದಿರುತ್ತಾರೆ. ನಂತರ 11–09–2025 ರಂದು ಪುನಃ ಹಲ್ಲೆ ಮಾಡಿರುವ ಬಗ್ಗೆ ಸಾಗರ ಗ್ರಾಮಾಂತರ ಪೊಲೀಸ್ ಠಾಣೆಗೆ ಪುನಃ ದೂರನ್ನು ನೀಡಿದ್ದು ಪೊಲೀಸರು ಎದುರುದಾರರನ್ನು ಕರೆಸಿ ಸೂಕ್ತವಾದ ಬುದ್ಧಿಮಾತನ್ನು ಹೇಳಿಕೊಂಡು ಬುದ್ಧಿವಾದವನ್ನು ಹೇಳಿ ಕಳಿಸಿರುತ್ತಾರೆ. ಹೀಗಿದ್ದಾಗ್ಯೂ ಎದುರುದಾರರು ಇಂದಲ್ಲಾ ನಾಳೆ ಸರಿಯಾಗಬಹುದೆಂದು ಪ್ರಾರಂಭದಲ್ಲಿ ಅರ್ಜಿದಾರರು ಸದರಿ ವಿಚಾರವನ್ನು ಯಾರಲ್ಲಿಯೂ ಪ್ರಸ್ತಾಪ ಮಾಡಿರುವುದಿಲ್ಲ. ದಿನಾಂಕ: 11–09–2025 ರಿಂದ ಅರ್ಜಿದಾರರು ತಮ್ಮ ತವರ ಮನೆಯಲ್ಲಿ ತಮ್ಮ ತಂದೆ–ತಾಯಿಯವರ

ಜೊತೆ ಪ್ರತ್ಯೇಕವಾಗಿ ವಾಸಮಾಡುತ್ತಿದ್ದಾರೆ. ಎದುರುದಾರರ ವಿವಾಹದ ಪ್ರಾರಂಭದ ಸ್ವಲ್ಪ ದಿನ ಮಾತ್ರ ಅರ್ಜಿದಾರರೊಂದಿಗೆ ಪ್ರೀತಿ ವಿಶ್ವಾಸದೊಂದಿಗೆ ಇದ್ದು, ನಂತರದ ದಿನಗಳಲ್ಲಿ ಅರ್ಜಿದಾರರ ಮನೆಯ ಖರ್ಚು-ವೆಚ್ಚಗಳ ವಿಚಾರದಲ್ಲಾಗಲೀ ಯಾವುದೇ ರೀತಿಯ ಕಾಳಜಿ ತೆಗೆದುಕೊಳ್ಳದೇ ಬೇಜವಾಬ್ದಾರಿತನದಿಂದ ನಡೆಸಿಕೊಂಡು ಬಂದಿರುತ್ತಾರೆ.

4. ಮುಂದುವರೆದು, ಎದುರುದಾರರು ಅರ್ಜಿದಾರರನ್ನು ನೋಡಿಕೊಳ್ಳದೇ ನಿರ್ಲಕ್ಷಿಸುತ್ತಿದ್ದು, ಅರ್ಜಿದಾರರ ಜೀವನ ನಿರ್ವಹಣೆಗೆ ಸಹಾಯ ಮಾಡಿರುವುದಿಲ್ಲ. ಅರ್ಜಿದಾರರಿಗೆ ಯಾವುದೇ ಮೂಲದಿಂದ ಆದಾಯ ಇಲ್ಲದೇ ಇರುವುದರಿಂದ ಹಾಗೂ ಜೀವನ ನಡೆಸಿಕೊಂಡು ಹೋಗುವುದೇ ಅಸಾಧ್ಯವಾಗಿದ್ದು ನ್ಯಾಯಾಲಯದಲ್ಲಿ ಜೀವನಾಂಶವನ್ನು ಕೋರಿ ಎದುರುದಾರರ ವಿರುದ್ಧ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಜೀವನ ನಿರ್ವಹಣೆಗೆ ತಿಂಗಳಿಗೆ ಕನಿಷ್ಠ ಪಕ್ಷ ಜೀವನಾಂಶದ ರೂಪದಲ್ಲಿ 30,000/- ರೂ ಗಳ ಅವಶ್ಯಕತೆ ಇರುತ್ತದೆ. ಎದುರುದಾರರು ಅರ್ಜಿದಾರರಿಗೆ ಜೀವನ ನಿರ್ವಹಣೆಗೆ ಜೀವನಾಂಶದ ರೂಪದಲ್ಲಿ ತಿಂಗಳಿಗೆ ಒಟ್ಟು 30,000/- ರೂ ಪಾವತಿಸಲು ಬದ್ಧನಿರುತ್ತಾನೆ. ಅರ್ಜಿದಾರರ ಪ್ರಕಾರ ಎದುರುದಾರರು ಡ್ರೈವಿಂಗ್ ಕೆಲಸ ಹಾಗೂ ಜಮೀನು ಸಾಗುವಳಿ ಕೆಲಸ ಮಾಡುತ್ತಿದ್ದು ಹಾಗೂ 4 ಎಕರೆಯಷ್ಟು ಜಮೀನಿದ್ದು, ಸದರಿ ವೃತ್ತಿಯಿಂದ ಎದುರುದಾರನಿಗೆ ಮಾಸಿಕ ಕನಿಷ್ಠ ರೂ.1,00,000/- ಗಳ ಆದಾಯವಿರುತ್ತದೆ. ಅರ್ಜಿದಾರರು ಕೇಳಿದ ಜೀವನಾಂಶ ಮೊತ್ತವನ್ನು ಹಣವನ್ನು ಪಾವತಿಸಲು ಶಕ್ತನಾಗಿರುತ್ತಾನೆ. ಆದ್ದರಿಂದ, ಅರ್ಜಿದಾರರಿಗೆ ಜೀವಿಸಲು ಎದುರುದಾರನಿಂದ 30 ಸಾವಿರ ರೂ. ಮಾಸಿಕ ಜೀವನಾಂಶದ ಅಗತ್ಯವಿರುತ್ತದೆ. ಆದ್ದರಿಂದ, ಈ ಅರ್ಜಿಯನ್ನು ಪುರಸ್ಕರಿಸುವ ಮೂಲಕ ಎದುರುದಾರನಿಂದ ಮಾಸಿಕ ರೂ. 30 ಸಾವಿರ ರೂ.ಗಳ ಜೀವನಾಂಶವನ್ನು ಕೊಡಿಸಬೇಕೆಂದು ಅರ್ಜಿದಾರರು ಕೋರಿರುತ್ತಾರೆ.

5. ನ್ಯಾಯಾಲಯದಿಂದ ಎದುರುದಾರರಿಗೆ ನೋಟೀಸ್ ಜಾರಿಯಾದ ನಂತರ ಎದುರುದಾರರು ತಮ್ಮ ವಕೀಲರ ಮೂಲಕ ಹಾಜರಾಗಿರುತ್ತಾರೆ. ಆದರೆ ಸಾಕಷ್ಟು ಕಾಲಾವಕಾಶವನ್ನು ನೀಡಿದರೂ ಸಹ ಎದುರುದಾರರು ಅರ್ಜಿದಾರರು ಸಲ್ಲಿಸಿದ ಅರ್ಜಿಗೆ ತಕರಾರನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಎದುರುದಾರರ ತಕರಾರನ್ನು ಇಲ್ಲವೆಂದು ತೆಗೆದುಕೊಂಡು ಮುಂದುವರೆಯಲಾಯಿತು.

6. ಅರ್ಜಿದಾರರು ತಮ್ಮ ಅರ್ಜಿಯಲ್ಲಿರುವ ವಿಷಯಗಳನ್ನು ಸಾಬೀತುಪಡಿಸಲು ತಮ್ಮನ್ನು ತಾವು ಪಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ತನ್ನ ಪರವಾಗಿ ಬೇರೆ ಯಾವ ಸಾಕ್ಷಿದಾರರನ್ನು ಸಹ ವಿಚಾರಣೆಗೆ ಗುರಿಪಡಿಸಿರುವುದಿಲ್ಲ. ಅರ್ಜಿದಾರರು ತಮ್ಮ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ನಿಪಿ.1 ರಿಂದ ನಿಪಿ.5 ದಾಖಲೆಗಳನ್ನು ಹಾಜರುಪಡಿಸಿ, ಗುರುತಿಸಿಕೊಂಡಿರುತ್ತಾರೆ.

7. ಸಾಕಷ್ಟು ಕಾಲಾವಕಾಶವನ್ನು ನೀಡಿದರು ಸಹ ಎದುರುದಾರನು ತಮ್ಮ ಪರವಾಗಿ ಯಾವುದೇ ಸಾಕ್ಷಿಯ ವಿಚಾರಣೆಯನ್ನು ಮಾಡಿಸಿರುವುದಿಲ್ಲ.

8. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

9. ಈ ಸಂದರ್ಭದಲ್ಲಿ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

1) ಈ ಪ್ರಕರಣದಲ್ಲಿ ಅರ್ಜಿದಾರರನ್ನು ಎದುರುದಾರ ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದ್ದಾನೆಂದು ಅರ್ಜಿದಾರರು ಸಾಬೀತು ಪಡಿಸುವರೇ?

2) ಅರ್ಜಿದಾರರು ತಾವು ಕೋರಿರುವ ಪರಿಹಾರವನ್ನು ಪಡೆಯಲು ಅರ್ಹರೇ?

3) ಯಾವ ಆದೇಶ?

10. ಮೇಲಿನ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶ ಸಂಖ್ಯೆ.1- ಸಕಾರಾತ್ಮಕವಾಗಿ

ಅಂಶ ಸಂಖ್ಯೆ.2- ಭಾಗಶಃ ಸಕಾರಾತ್ಮಕವಾಗಿ

ಅಂಶ ಸಂಖ್ಯೆ.3- ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ

## ಕಾರಣಗಳು

11. <u>ಅಂಶ ಸಂಖ್ಯೆ. **1** ಮತ್ತು **2**</u>- ಮೇಲಿನ ಅಂಶ ಸಂಖ್ಯೆ.1 ಮತ್ತು 2 ಒಂದಕ್ಕೊಂದು ಅಂತರಸಂಬಂಧವನ್ನು ಹೊಂದಿರುವುದರಿಂದ ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಎರಡೂ ಅಂಶಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಅರ್ಜಿದಾರರು ಮತ್ತು ಎದುರುದಾರರ ನಡುವಿನ ಸಂಬಂಧದ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. 1 ನೇ ಅರ್ಜಿದಾರಳು ತನ್ನ ಪತ್ನಿ, 2 ನೇ ಮತ್ತು 3 ನೇ ಅರ್ಜಿದಾರ ತಮ್ಮ ಪುತ್ರ ಮತ್ತು ಪುತ್ರಿ ಅಲ್ಲವೆಂದು ಎದುರುದಾರರು ಅಲ್ಲಗಳೆದಿರುವುದಿಲ್ಲ. ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 144 ರಲ್ಲಿ ಸಲ್ಲಿಸಿರುವ ಈ ಅರ್ಜಿಯಲ್ಲಿ ಅರ್ಜಿದಾರಳು ಎದುರುದಾರನು ತನ್ನನ್ನು ಮತ್ತು ತನ್ನ ಮಕ್ಕಳನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದ್ದಾನೆ ಎಂಬ ಅಂಶವನ್ನು ಸಾಬೀಸುಪಡಿಸಬೇಕು. ಎದುರುದಾರನು ಅರ್ಜಿದಾರಳು ತನ್ನ ಕಾನೂನು ಬದ್ಧ ಪತ್ನಿ ಅಲ್ಲವೆಂದು ಅಲ್ಲಗಳೆದಿರುವುದಿಲ್ಲ.

12. ಮುಂದುವರೆದು, ಎದುರುದಾರ ಅರ್ಜಿದಾರಳ ಅರ್ಜಿಯ ಅಂಶಗಳನ್ನು ತಕಾರರಿನ ಮೂಲಕ ಅಲ್ಲಗಳೆದಿರುವುದಿಲ್ಲ ಹಾಗೂ ಅರ್ಜಿದಾರಳನ್ನು ಪಾಟೀ ಸವಾಲಿಗೆ ಸಹ ಒಳಪಡಿಸಿರುವುದಿಲ್ಲ. ಸಾಕಷ್ಟು ಕಾಲಾವಕಾಶವನ್ನು ನೀಡಿದರು ಸಹ ಎದುರುದಾರ ಅರ್ಜಿದಾರಳನ್ನು ಪಾಟೀ ಸವಾಲಿಗೆ ಒಳಪಡಿಸುವ ಪ್ರಯತ್ನವನ್ನೇ ಮಾಡಿರುವುದಿಲ್ಲ. ಹೀಗಿರುವಾಗ, ಎದುರುದಾರ ಅರ್ಜಿದಾರಳನ್ನು ಪಾಟೀ ಸವಾಲಿಗೆ ಒಳಪಡಿಸುವ ಮೂಲಕ ತಾನು ಅರ್ಜಿದಾರಳನ್ನು ಮತ್ತು ಮಕ್ಕಳನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿರುವುದಿಲ್ಲ ಎಂದು ಅರ್ಜಿದಾರರ ಪರವಾಗಿರುವ ಪೂರ್ವಭಾವನೆಯನ್ನು ಅಲ್ಲಗಳೆಯುವ ಪ್ರಯತ್ನವನ್ನೇ ಮಾಡಿರುವುದಿಲ್ಲ. ಹೀಗಿರುವಾಗ ಈ ನ್ಯಾಯಾಲಯವು ಎದುರುದಾರ ಅರ್ಜಿದಾರರನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದ್ದಾನೆಂಬ ಪೂರ್ವಭಾವನೆಯನ್ನು ಅರ್ಜಿದಾರರ ಪರವಾಗಿ ತಳೆಯುತ್ತದೆ. ಎದುರುದಾರ ಅರ್ಜಿದಾರರ ಸಾಕ್ಷ್ಯವನ್ನು ಖಂಡಿಸದೇ ಇರುವುದರಿಂದ ಅರ್ಜಿದಾರರ ಸಾಕ್ಷ್ಯವು ಅರ್ಜಿದಾರರು ಸಲ್ಲಿಸಿರುವ ಪ್ರಕರಣಕ್ಕೆ ಪೂರಕ ಸಾಕ್ಷ್ಯವೆಂದು ನ್ಯಾಯಾಲಯವು ಪರಿಗಣಿಸಿರುತ್ತದೆ. ಈ ಮೂಲಕ ಎದುರುದಾರ ಅರ್ಜಿದಾರರನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸಿದ್ದಾನೆ ಎಂಬ ನಿರ್ಣಯಕ್ಕೆ ನ್ಯಾಯಾಲಯವು ಬಂದಿರುತ್ತದೆ.

13. ಮುಂದುವರೆದು, ಅರ್ಜಿದಾರರು ಎದುರುದಾರ 30,000/- (ಮೂವತ್ತು ಸಾವಿರ ರೂಗಳ) ಜೀವನಾಂಶವನ್ನು ನೀಡಲು ಸಮರ್ಥನಾಗಿರುತ್ತಾನೆಂದು ಮತ್ತು ಡ್ರೈವಿಂಗ್ ಮತ್ತು ಕೃಷಿ ಕೆಲಸದಿಂದ ಮಾಸಿಕ 1,00,000/- (ಒಂದು ಲಕ್ಷ) ರೂ.ಗಳ ಆದಾಯ ಗಳಿಸುತ್ತಿದ್ದಾನೆಂದು ಪ್ರತಿಪಾದಿಸಿರುತ್ತಾರೆ. 1 ನೇ ಅರ್ಜಿದಾರಳು ಸಾಕ್ಷ್ಯ ವಿಚಾರಣೆಗೆ ಒಳಪಟ್ಟು ಒಟ್ಟಾರೆ 5 ದಾಖಲೆಗಳನ್ನು ಹಾಜರುಪಡಿಸಿ ಅವುಗಳನ್ನು ನಿಪಿ-1 ರಿಂದ 5 ಎಂದು ಗುರುತುಪಡಿಸಿಕೊಂಡಿರುತ್ತಾರೆ. ನಿಪಿ-1 ದಾಖಲೆಯು ವಿವಾಹ ನೋಂದಣಿ ಪತ್ರವಾಗಿರುತ್ತದೆ. ನಿಪಿ-2 ದಾಖಲೆಯು ವಿವಾಹದ ಅಮಂತ್ರಣ

ಪತ್ರಿಕೆಯಾಗಿರುತ್ತದೆ. ನಿಪಿ-3 ದಾಖಲೆಯು 1 ನೇ ಅರ್ಜಿದಾರಳ ಆಧಾರ್ ಕಾರ್ಡ್. ನಿಪಿ-4 ದಾಖಲೆಯು 2 ನೇ ಅರ್ಜಿದಾರಳ ಆಧಾರ್ ಕಾರ್ಡ್. ನಿಪಿ-5 ದಾಖಲೆಯು 1 ನೇ ಅರ್ಜಿದಾರಳು ಮತ್ತು ಎದುದಾರನ ಜೊತೆಗಿರುವ ಛಾಯಾಚಿತ್ರ.

14. ಮುಂದುವರೆದು, ಅರ್ಜಿದಾರಳು ಹಾಜರುಪಡಿಸಿರುವ ದಾಖಲೆಗಳು ಎದುರುದಾನ ಆಧಾಯದ ಕುರಿತು ಸಮರ್ಥನೆ ನೀಡುವ ದಾಖಲೆಗಳಾಗಿರುವುದಿಲ್ಲ. ಆದ್ದರಿಂದ ಎದುರುದಾರ ಮಾಸಿಕ ರೂ.1,00,000/- (ಒಂದು ಲಕ್ಷ) ರೂ. ಗಳ ಆದಾಯವನ್ನು ಗಳಿಸುತ್ತಿದ್ದಾನೆಂದು ನ್ಯಾಯಾಲಯವು ನಿರ್ಣಯಿಸಲು ಸಾಧ್ಯವಿರುವುದಿಲ್ಲ. 1 ನೇ ಅರ್ಜಿದಾರಳು ದೈಹಿಕವಾಗಿ ಅಸಮರ್ಥಳು ಎಂಬುದಕ್ಕೆ ಯಾವುದೇ ಪೂರಕ ದಾಖಲೆಗಳು ಇರುವುದಿಲ್ಲ. 1 ನೇ ಅರ್ಜಿದಾರಳು ಸಹ ಕೆಲಸವನ್ನು ಮಾಡಿ ಆದಾಯವನ್ನು ಗಳಿಸಬಹುದು ಅಲ್ಲಿಯವರೆಗೂ 1 ನೇ ಅರ್ಜಿದಾರಳಿಗೆ ಮಾತ್ರ ಎದುರುದಾರ ಸಹಾಯಕ ಜೀವನಾಂಶವನ್ನು ಪಾವತಿಸಲು ಬದ್ಧನಾಗಿರುತ್ತಾನೆ. 2 ನೇ ಮತ್ತು 3 ನೇ ಅರ್ಜಿದಾರರು ಅಪ್ರಾಪ್ತರಾಗಿರುವುದರಿಂದ ಸದರಿ ರವರು ಪ್ರಾಪ್ತ ವಯಸ್ಸಿಗೆ ಬರುವವರೆಗೂ ಎದುರುದಾರ 2 ಮತ್ತು 3 ನೇ ಅರ್ಜಿದಾರರಿಗೆ ಜೀವನಾಂಶವನ್ನು ನೀಡಲು ಬದ್ಧನಾಗಿರುತ್ತಾನೆ. ಎದುರುದಾರನಿಗೆ ಇರುವ ನಿಖರವಾದ ಆದಾಯದ ಕುರಿತು ಯಾವುದೇ ಪೂರಕವಾದ ದಾಖಲೆಗಳು ಲಭ್ಯವಿಲ್ಲದ ಕಾರಣ ಈ ನ್ಯಾಯಾಲಯವು ಅರ್ಜಿದಾರರು ಕೋರಿರುವ 30,000/- (ಮೂವತ್ತು ಸಾವಿರ) ರೂ.ಗಳ ಮಾಸಿಕ ಜೀವನಾಂಶವನ್ನು ಎದುರುದಾರನಿಂದ ಕೊಡಿಸುವ ಆದೇಶವನ್ನು ಮಾಡಲು ಸಾಧ್ಯವಿರುವುದಿಲ್ಲ. 1 ನೇ ಅರ್ಜಿದಾರಳಿಗೆ ಎದುರುದಾರನಿಂದ ಮಾಸಿಕ 1000 ರೂ. ಜೀವನಾಂಶವನ್ನು ಆಕೆಯು ಉದ್ಯೋಗಕ್ಕೆ ಹೋಗುವವರೆಗೆ ಹಾಗೂ 2 ಮತ್ತು 3 ನೇ ಅರ್ಜಿದಾರನಿಗೆ ಎದುರುದಾರನಿಂದ ಮಾಸಿಕ ಒಟ್ಟಾರೆಯಾಗಿ ರೂ.4,000 ರೂ. ಗಳ ಜೀವನಾಂಶವನ್ನು 2 ಮತ್ತು 3 ನೇ ಅರ್ಜಿದಾರರು ಪ್ರಾಪ್ತ ವಯಸ್ಸಿಗೆ ಬರುವವರೆಗೂ ಪಾವತಿಸುವಂತೆ ನಿರ್ದೇಶನವನ್ನು ನೀಡುವುದು ಸೂಕ್ತವಾಗಿರುತ್ತದೆ.

ಆದ್ದರಿಂದ, ಈ ನ್ಯಾಯಾಲಯವು 1 ನೇ ಅಂಶವನ್ನು ಸಕಾರಾತ್ಮಕವಾಗಿ, 2 ನೇ ಅಂಶವನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಿರುತ್ತದೆ.

15. **<u>ಅಂಶ ಸಂಖ್ಯೆ.3-</u>** ಈ ಮೇಲಿನ ಎಲ್ಲಾ ಅಂಶಗಳಿಗೆ ನೀಡಿರುವ ಕಾರಣಗಳಾನುಸಾರ ಈ ಕೆಳಗಿನ ಆದೇಶವನ್ನು ಮಾಡಿರುತ್ತೇನೆ.

# ಆದೇಶ

ಅರ್ಜಿದಾರರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂಃ 144 ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಭಾಗಶಃ ಪುರಸ್ಕರಿಸಲಾಗಿದೆ.

ಎದುರುದಾರನು 1 ನೇ ಅರ್ಜಿದಾರಳಿಗೆ ಈ ಆದೇಶವಾದ ದಿನದಿಂದ ಆಕೆಯು ಉದ್ಯೋಗಕ್ಕೆ ಹೋಗುವವರೆಗೆ ಜೀವನಾಂಶವಾಗಿ ಮಾಸಿಕ 1,000/- ರೂ.ಗಳನ್ನು ನೀಡತಕ್ಕದ್ದು. ಎದುರುದಾರನು 2 ಮತ್ತು 3 ನೇ ಅರ್ಜಿದಾರನಿಗೆ ಒಟ್ಟಾರೆಯಾಗಿ ಮಾಸಿಕ 4,000 ರೂ. ಗಳ ಜೀವನಾಂಶವನ್ನು ಈ ಆದೇಶವಾದ ದಿನದಿಂದ 2 ಮತ್ತು 3 ನೇ ಅರ್ಜಿದಾರರು ಪ್ರಾಪ್ತ ವಯಸ್ಸಿಗೆ ಬರುವವರೆಗೆ ನೀಡತಕ್ಕದ್ದು.

ವೆಚ್ಚಗಳ ಬಗ್ಗೆ ಯಾವುದೇ ಆದೇಶವಿಲ್ಲ.

ಉಭಯ ಪಕ್ಷಗಾರರಿಗೆ ಆದೇಶದ ಪ್ರತಿಗಳನ್ನು ಕಛೇರಿಯು ಉಚಿತವಾಗಿ ನೀಡತಕ್ಕದ್ದು.

(ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರನಲ್ಲಿ ಬೆರಳಚ್ಚು ಮಾಡಿಸಿ, ನಂತರದಲ್ಲಿ ಆದೇಶವನ್ನು ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕಃ 29.07.2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)

**(ಚಾಂದಿನಿ ಜಿ.ಯು)**
**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ**
**ಸಾಗರ.**

## ಅನುಬಂಧ

**ಅರ್ಜಿದಾರರ ಪರವಾಗಿ ವಿಚಾರಿಸಲ್ಪಟ್ಟ ಸಾಕ್ಷಿದಾರರು**

ಪಿ.ಡಬ್ಲ್ಯೂ.1: ಶ್ರೀಮತಿ ಸರೋಜ.

**ಅರ್ಜಿದಾರರ ಪರವಾಗಿ ಗುರುತಿಸಲ್ಪಟ್ಟ ದಾಖಲೆಗಳು**

ನಿಪಿ.1: ವಿವಾಹ ನೋಂದಣಿ ಪತ್ರ.

ನಿಪಿ.2: ವಿವಾಹದ ಅಮಂತ್ರಣ ಪತ್ರಿಕೆ.

ನಿಪಿ.3: 1 ನೇ ಅರ್ಜಿದಾರಳ ಆಧಾರ್ ಕಾರ್ಡ್.

ನಿಪಿ.4: 2 ನೇ ಅರ್ಜಿದಾರಳ ಆಧಾರ್ ಕಾರ್ಡ್.

ನಿಪಿ.5: ಛಾಯಾಚಿತ್ರ.

**ಎದುರುದಾರರ ಪರವಾಗಿ ವಿಚಾರಿಸಲ್ಪಟ್ಟ ಸಾಕ್ಷಿದಾರರು**

---ಇಲ್ಲ----

**ಎದುರುದಾರರ ಪರವಾಗಿ ಗುರುತಿಸಲ್ಪಟ್ಟ ದಾಖಲಾತಿ**

---ಇಲ್ಲ----

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ನ್ಯಾಯಿಕ ದಂಡಾಧಿಕಾರಿಗಳವರ**
**ನ್ಯಾಯಾಲಯ, ಸಾಗರ.**